ಅ) ಬೆಂಗಳೂರು ಮಹಾನಗರಪಾಲಿಕೆಯಿಂದ 1983ರಲ್ಲಿ ಜಯನಗರ 5ನೇ ಬ್ಲಾಕ್ ನಲ್ಲಿ ಸಮುದಾಯ ಭವನ ಮಂಜೂರಾಗಿರುವುದು ನಿಜವೇ?

ಆ) ಹಾಗಿದ್ದಲ್ಲಿ ಜಯನಗರ 5ನೇ ಬ್ಲಾಕ್‌ನಲ್ಲಿ ಸಮುದಾಯಭವನ ನಿರ್ಮಾಣಕಾರ್ಯವನ್ನು ಕೈಗೆತ್ತಿಕೊಳ್ಳಲಾಗಿದೆಯೇ?

ಇ) ಹಾಗಿದ್ದಲ್ಲಿ ಅದಕ್ಕೆ ಸಕಾರಣಗಳೇನು?

ಈ) ಮೇಲಿನ ಕೆಲಸವನ್ನು ಯಾವಾಗ ತೆಗೆದುಕೊಳ್ಳಲಾಗುವುದು.

ಶ್ರೀ ಚೌಡರೆಡ್ಡಿ (ನಗರಾಭಿವೃದ್ಧಿ ಸಚಿವರು):

ಅ) ಹೌದು

ಆ) ಇಲ್ಲ

ಇ) ಜಯನಗರ 5ನೇ ಬ್ಲಾಕ್‌ನ ನಿವಾಸಿಗಳು ಉಚ್ಚ ನ್ಯಾಯಾಲಯದಿಂದ ತಡೆಯಾಜ್ಞೆ ಡಬ್ಲ್ಯೂ ಪಿ.ನ. 7710:84, ದಿನಾಂಕ 7-5-84ರಂದು ತಂದ ಪ್ರಯುಕ್ತ ಕೆಲಸವನ್ನು ಕೈಗೆತ್ತಿಕೊಳ್ಳಲಾಗುವುದಿಲ್ಲ.

ಈ) ಮೇಲೆ ತಿಳಿಸಿದ ತಡೆಯಾಜ್ಞೆಯ 24-4-90ರಂದು ತೆರವಾಗಿದೆ. ಕಾಮಗಾರಿ ಪ್ರಾರಂಭಿಸಲು ಮುಂದಿನ ಕ್ರಮ ಕೈಗೊಳ್ಳಲಾಗುತ್ತಿದೆ.

ಶ್ರೀ ರಾಮಲಿಂಗಾರೆಡ್ಡಿ : 1983ರಲ್ಲಿ ಜಯನಗರ 5ನೇ ಬ್ಲಾಕಿನಲ್ಲಿ ಕಮ್ಯೂನಿಟಿ ಹಾಲ್ ಕಟ್ಟಬೇಕು ಎಂದು ಆಯಿತು. ಅಲ್ಲಿ ಲೋಕಲ್ ರೆಸಿಡೆನ್ಸಿ ಎಲ್ಲಾ ಕೋರ್ಟಿಗೆ ಹೋಗಿ ಒಂದು ಸ್ಟೇ ತಂದರು. 1989ರಲ್ಲಿ ಅದು ಸ್ಟೇ ವೆಕೇಂಟ್ ಆಯಿತು. ಸ್ಟೇ ವೆಕೇಂಟ್ ಆಗಿ ಎರಡು ವರ್ಷ ಆಗಿದ್ದರೂ ಇನ್ನು ಕಮ್ಯೂನಿಟಿ ಹಾಲ್ ಕಟ್ಟುವುದಕ್ಕೆ ಆಗಿಲ್ಲ. ಕಾರ್ಪೊರೇಷನ್ನಿನವರು ಯಾವಾಗ ಇದನ್ನು ಪ್ರಾರಂಭ ಮಾಡುತ್ತಾರೆ?

ಶ್ರೀ ಚೌಡರೆಡ್ಡಿ : ಸನ್ಮಾನ್ಯ ಅಧ್ಯಕ್ಷರೇ, 1982-83ನೇ ಇಸವಿಯಲ್ಲಿ ಈ ಕಮ್ಯೂನಿಟಿ ಹಾಲ್ ಕಟ್ಟಬೇಕು ಎಂದು 9.75 ಲಕ್ಷ ಎಸ್ಟಿಮೇಟ್‌ನ್ನು ಮಾಡಿದರು. ಅದು ಅಪ್ರೂವ್ ಆಯಿತು. ಈ ಮಧ್ಯೆ 7-8-94ರಲ್ಲಿ ಒಬ್ಬರು ರಿಟ್ ಪೆಟಿಷನ್ ಹೈಕೋರ್ಟಿನಲ್ಲಿ ಹಾಕಿ ಅದು ಸ್ಟೇ ಆಗಿ ಆ ರಿಟ್ ಪೆಟಿಷನ್ 24-10-90ರಲ್ಲಿ ವೇಕೆಂಟ್ ಆಗಿದೆ. ಅದು ಡಿಸ್ ಪೋಸ್ ಆಗಿಬಿಟ್ಟಿದೆ. ಈಗ 92-93ರಲ್ಲಿ ವರ್ಕ್ಸ್ ಕಮಿಟಿಯಲ್ಲಿ ಇದನ್ನು ಅಪ್ರೂವ್ ಮಾಡಿದ್ದಾರೆ. ಅದನ್ನು ಬೇಗ ಮಾಡಿಸುತ್ತೇನೆ.

ಶ್ರೀ ರಾಮಲಿಂಗರೆಡ್ಡಿ : ಹೈಕೋರ್ಟಿನಲ್ಲಿ ಸ್ಟೇ ಇತ್ತು, ಸ್ಟೇ ವೇಕೆಂಟ್ ಆಗಿ ಎರಡು ವರ್ಷ ಆಗಿದೆ. ಆದರೂ ಪ್ರಾರಂಭ ಮಾಡಿಲ್ಲ. ಯಾವಾಗ ಪ್ರಾರಂಭ ಮಾಡುತ್ತಾರೆ ಅದನ್ನು ಹೇಳಬೇಕು.

ಶ್ರೀ ಚೌಡರೆಡ್ಡಿ : ಇದು ವರ್ಕ್ಸ್ ಕಮಿಟಿಯಲ್ಲಿ 1992-93ರಲ್ಲಿ 21ಲಕ್ಷಕ್ಕೆ ಅಪ್ರೂವ್ ಆಗಿದೆ. ಮಂಜೂರು ಮಾಡಿದ್ದಾರೆ. ಬೇಗ ತೆಗೆದುಕೊಳ್ಳುತ್ತೇವೆ.

ಬೆಳಗಾವಿ ನಗರಾಭಿವೃದ್ಧಿ ಪ್ರಾಧಿಕಾರದಿಂದ ವ್ಯವಸಾಯದ ಭೂಮಿಯ ಭೂ ಸ್ವಾಧೀನ.

711-ಶ್ರೀ ಬಿ.ಐ. ಪಾಟೀಲ್ (ಉಚಾಗಾಂವ್): ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಳಗಾವಿ ನಗರಾಭಿವೃದ್ಧಿ ಪ್ರಾಧಿಕಾರವು ಫಲವತ್ತಾದ ವ್ಯವಸಾಯದ ಭೂಮಿಯನ್ನು ನಗರಾಭಿವೃದ್ಧಿ ಪ್ರಾಧಿಕಾರ ಭೂ ಸ್ವಾಧೀನ ಮಾಡಿದೆಯೇ?

ಆ) ಈ ಬಗ್ಗೆ ಸರ್ಕಾರದ ನೀತಿ ಏನು?

ಶ್ರೀ ಚೌಡರೆಡ್ಡಿ (ನಗರಾಭಿವೃದ್ಧಿ ಸಚಿವರು):

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಖಾಸಗಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ವಸತಿನಿಲಯದ ನಿರ್ಮಾಣದ ಬಗ್ಗೆ

1032-ಶ್ರೀ ಮನೋಹರ ಐನಾಪುರ (ಬೆಳ್ಳೊಳ್ಳಿ): ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಖಾಸಗಿ ವಿದ್ಯಾಸಂಸ್ಥೆಯವರು ನಡೆಸುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಅನುದಾನಿತ ವಿದ್ಯಾರ್ಥಿನಿಲಯಗಳ ನಿರ್ಮಾಣಕ್ಕಾಗಿ ಎಷ್ಟು ಹಣ ಒದಗಿಸಲಾಗಿದೆ?

ಆ) ಹಾಗಾದರೆ, 1992-93ನೇ ಸಾಲಿನಲ್ಲಿ ಎಷ್ಟು ವಿದ್ಯಾರ್ಥಿನಿಲಯಗಳನ್ನು ಸರ್ಕಾರವು ಮಂಜೂರು ಮಾಡಲಾಗಿದೆ.

ಶ್ರೀ ಧರ್ಮಸಿಂಗ್ (ಸಮಾಜ ಕಲ್ಯಾಣ ಸಚಿವರು):

ಅ) 1992-93ನೇ ಸಾಲಿನಲ್ಲಿ ರೂ. 20,000 ಲಕ್ಷ ಒದಗಿಸಲಾಗಿದೆ.

ಆ) 1992-93ನೇ ಸಾಲಿನಲ್ಲಿ ಇದುವರೆಗೆ ಒಂದು ಅನುದಾನಿತ ವಿದ್ಯಾರ್ಥಿನಿಲಯಕ್ಕೆ ರೂ. 75,500 ಗಳ ಧನಸಹಾಯ ನೀಡಲಾಗಿದೆ. ಪ್ರಸ್ತಾವನೆಗಳು ಬಂದ ಹಾಗೆ, ಪರಿಶೀಲಿಸಿ ತೀರ್ಮಾನ ತೆಗೆದುಕೊಳ್ಳಲಾಗುವುದು.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಪ. ಜಾತಿ, ಪ.ವರ್ಗದ ವಿದ್ಯಾರ್ಥಿನಿಯರ ವಿದ್ಯಾರ್ಥಿ ನಿಲಯಗಳೇ ದುರಸ್ತಿ.

707- ಶ್ರೀ ಅಂಜನಾಮೂರ್ತಿ (ನೆಲಮಂಗಲ): ಮಾನ್ಯ ಸಮಾಜ ಕಲ್ಯಾಮ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ರಾಜ್ಯಾದ್ಯಂತ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ವಿದ್ಯಾರ್ಥಿನಿಲಯಗಳು ದುಸ್ಥಿತಿಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?